ದೂರವಾಣಿ : 080 - 22263479

ಬೆಂ.ಮ.ಪ್ರ.ಪ್ರಾ.

# ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ನಂ. 1, ಆಲಿ ಆಸ್ಕರ್ ರಸ್ತೆ, ಬೆಂಗಳೂರು – 560 052.

**ಸಂಖ್ಯೆ: STRRPA/TP/DP-05/2016-17** **ದಿನಾಂಕ:08.09.2017**

## ಪ್ರಾರಂಭಿಕ ಪ್ರಮಾಣ ಪತ್ರ

**ನಮೂನೆ- III**

**ನಿಯಮ – ೩೮**

**ವಿಷಯ:** ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಮಂಚೇನಹಳ್ಳಿ ಗ್ರಾಮದ ಸ.ನಂ. 5/1ರಲ್ಲಿ 02ಎ–07ಗು, 5/2ರಲ್ಲಿ 0–20ಗು, 7/2ರಲ್ಲಿ 01ಎ–32ಗು, 10/2ರಲ್ಲಿ 03ಎ–05ಗು, 44/2ರಲ್ಲಿ 0–35ಗು, 44/5ರಲ್ಲಿ 01ಎ–30ಗು, 45/2ಸಿರಲ್ಲಿ 0–24ಗು, 46ರಲ್ಲಿ 05ಎ–24ಗು, 47ರಲ್ಲಿ 01ಎ–28ಗು, ಒಟ್ಟು 18ಎ–05ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ವಸತಿ ಅಭಿವೃದ್ಧಿ ಯೋಜನೆ ನಕ್ಷೆ (Group Housing Development Plan) ಅನುಮೋದನೆ ನೀಡುವ ಬಗ್ಗೆ.

**ಉಲ್ಲೇಖ:**
1) ಅರ್ಜಿದಾರರಾದ ಮೆ॥ ಐಕಾನಿಕಾ ಪ್ರಾಜೆಕ್ಟ್ಸ್ ಇವರ ಅರ್ಜಿ ದಿನಾಂಕ: 17.10.2016.
2) ದಿನಾಂಕ:02.08.2017 ರಂದು ನಡೆದ ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರದ 4ನೇ ಸಭೆಯ ವಿಷಯ ಸಂಖ್ಯೆ:4.32 ರ ನಡವಳಿಕೆ
3) ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರದ ಹಣ ಪಾವತಿಸಿದ ದಿನಾಂಕ:30.08.2017 ಡಿ.ಡಿ ಸಂಖ್ಯೆ:921823 ರೂ.14,82,980.00, ರಶೀದಿ ಸಂಖ್ಯೆ: 261 ಹಾಗೂ ಕೆರೆಗಳಲ್ಲಿ ನೀರು ಸಂರಕ್ಷಣೆ ಶುಲ್ಕ ಡಿ.ಡಿ ಸಂಖ್ಯೆ:921822, ರೂ.18,33,725/–, ರಶೀದಿ ಸಂಖ್ಯೆ: 262.
4) ಅರ್ಜಿದಾರರು ಸಲ್ಲಿಸಿರುವ ಪರಿತ್ಯಾಜನಾ ಪತ್ರ ದಿನಾಂಕ: 02.05.2017.

***^***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಲ್ಲಿನ ಅರ್ಜಿಯಲ್ಲಿ ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಮಂಚೇನಹಳ್ಳಿ ಗ್ರಾಮದ ಸ.ನಂ. 5/1ರಲ್ಲಿ 02ಎ–07ಗು, 5/2ರಲ್ಲಿ 0–20ಗು, 7/2ರಲ್ಲಿ 01ಎ–32ಗು, 10/2ರಲ್ಲಿ 03ಎ–05ಗು, 44/2ರಲ್ಲಿ 0–35ಗು, 44/5ರಲ್ಲಿ 01ಎ–30ಗು, 45/2ಸಿರಲ್ಲಿ 0–24ಗು, 46ರಲ್ಲಿ 05ಎ–24ಗು, 47ರಲ್ಲಿ 01ಎ–28ಗು, ಒಟ್ಟು 18ಎ–05ಗುಂಟೆ ಜಮೀನಿನಲ್ಲಿ ವಸತಿ ಅಭಿವೃದ್ಧಿ ಯೋಜನೆ ಯೋಜನಾ ನಕ್ಷೆ ಅನುಮೋದನೆ ಕೋರಲಾಗಿತ್ತು. ಉಲ್ಲೇಖ (2)ರಲ್ಲಿನ ದಿನಾಂಕ: 02.08.2017ರಂದು ನಡೆದ ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ: 4.32ರ ನಡವಳಿಕೆಯಲ್ಲಿ ವಸತಿ ಅಭಿವೃದ್ಧಿ ಯೋಜನೆ ನಕ್ಷೆ (Group Housing Development Plan) ಅನುಮೋದಿಸಲು ತೀರ್ಮಾನಿಸಲಾಗಿತ್ತು. ಅರ್ಜಿದಾರರು ಉಲ್ಲೇಖ (3) ರಲ್ಲಿ ನಿಗದಿತ ಶುಲ್ಕವನ್ನು ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ.

2...

ಉಲ್ಲೇಖ (4)ರಲ್ಲಿನ ನೋಂದಾಯಿತ ಪರಿತ್ಯಾಜನಾ ಪತ್ರದ ರೀತ್ಯ ವಸತಿ ಅಭಿವೃದ್ಧಿ ಯೋಜನೆ ನಕ್ಷೆಯಲ್ಲಿನ ಉಪನಗರ ವರ್ತುಲ ರಸ್ತೆ (STRR) ಲ್ಯಾಂಡ್‌ಬ್ಯಾಂಕ್, ರಸ್ತೆ ವಿಸ್ತೀರ್ಣ ಪ್ರದೇಶ ಹಾಗೂ ಉದ್ಯಾನವನ ಪ್ರದೇಶಗಳನ್ನು ಈ ಪ್ರಾಧಿಕಾರಕ್ಕೆ ಪುಕ್ಕಟೆಯಾಗಿ ನೋಂದಾಯಿತ ಪರಿತ್ಯಾಜನಾ ಪತ್ರದ ಮುಖಾಂತರ ಹಸ್ತಾಂತರಿಸಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಮಂಚೇನಹಳ್ಳಿ ಗ್ರಾಮದ ಸ.ನಂ. 5/1ರಲ್ಲಿ 02ಎ-07ಗು, 5/2ರಲ್ಲಿ 0-20ಗು, 7/2ರಲ್ಲಿ 01ಎ-32ಗು, 10/2ರಲ್ಲಿ 03ಎ-05ಗು, 44/2ರಲ್ಲಿ 0-35ಗು, 44/5ರಲ್ಲಿ 01ಎ-30ಗು, 45/2ಸಿರಲ್ಲಿ 0-24ಗು, 46ರಲ್ಲಿ 05ಎ-24ಗು, 47ರಲ್ಲಿ 01ಎ-28ಗು, ಒಟ್ಟು 18ಎ-05ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 15ರ ಅಡಿಯಲ್ಲಿ ವಸತಿ ಅಭಿವೃದ್ಧಿ ಯೋಜನೆ ನಕ್ಷೆಯನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಮೋದಿಸಲಾಗಿದೆ.

## ಷರತ್ತುಗಳು

1) ಪ್ರಾಧಿಕಾರಕ್ಕೆ ಸಂಬಂಧಪಟ್ಟ ಶುಲ್ಕಗಳನ್ನು ಪಾವತಿಸುವುದು.
2) ಕುಡಿಯುವ ನೀರು ಹಾಗೂ ತ್ಯಾಜ್ಯ ನೀರು ವಿಲೇವಾರಿ ಮತ್ತು ಒಳಚರಂಡಿ ವ್ಯವಸ್ಥೆಯನ್ನು ಅರ್ಜಿದಾರರೇ ಕಲ್ಪಿಸುವುದು. ಕುಡಿಯುವ ನೀರು ಪೂರೈಕೆ ಬಗ್ಗೆ ಅರ್ಜಿದಾರರು ಖಾತ್ರಿಪಡಿಸುವುದು.
3) ಅಭಿವೃದ್ಧಿ ಯೋಜನೆಯಲ್ಲಿ ಅರ್ಜಿದಾರರು ಕಡ್ಡಾಯವಾಗಿ ಮಳೆನೀರು ಕೊಯ್ಲಿಗೆ ಸಂಬಂಧಿಸಿದಂತೆ ಪೂರ್ಣ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿ ಉದ್ದೇಶಿತ ಒಟ್ಟು ಕ್ಷೇತ್ರದಲ್ಲಿ ಬೀಳುವ ಮಳೆನೀರು ವ್ಯರ್ಥವಾಗಿ ಹೊರಗೆ ಹೋಗದಂತೆ ಉದ್ದೇಶಿತ ಜಮೀನಿನಲ್ಲಿಯೇ ಭೂಮಿಯ ಒಳಗಡೆ ಇಂಗುವಂತೆ ಮಾಡಲು ವಿನ್ಯಾಸವನ್ನು ಸಿದ್ಧಪಡಿಸಿ ಪೂರ್ಣ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿ ತೋರಿಸತಕ್ಕದ್ದು.
4) ಪ್ರಾಧಿಕಾರವು ಅನುಮೋದಿಸಿರುವ ಅಭಿವೃದ್ಧಿ ಯೋಜನಾ ನಕ್ಷೆಯಂತೆಯೇ ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತ ಮಾಡುವುದು. ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಯಾವುದೇ ಬದಲಾವಣೆ ಮಾಡುವಂತಿಲ್ಲ.
5) ಉದ್ಯಾನವನ ಮತ್ತು ಬಯಲು ಜಾಗಗಳನ್ನು ಹಾಗೂ ಸಿ.ಎ. ಜಾಗಗಳನ್ನು ಅನುಮೋದಿತ ನಕ್ಷೆ ಪ್ರಕಾರ ಅಭಿವೃದ್ಧಿಪಡಿಸುವುದು.
6) ಅಭಿವೃದ್ಧಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಪ್ರದೇಶದಲ್ಲಿ ವಿವಿಧ ಜಾತಿಯ ಗಿಡಮರಗಳನ್ನು ಬೆಳೆಸಿ ಅಭಿವೃದ್ಧಿಪಡಿಸುವುದು.
7) ಕಟ್ಟಡ ಕಾಮಗಾರಿ ಪ್ರಾರಂಭವಾದ ನಂತರ ಕಟ್ಟಡ ಸುರಕ್ಷತೆಯ ಬಗ್ಗೆ ಸಂಬಂಧಿಸಿದ ಸಕ್ಷಮ ಪ್ರಾಧಿಕಾರದ ಪರಿಶೀಲಿಸಿಕೊಳ್ಳತಕ್ಕದ್ದು.
8) ವಿವರವಾದ ಕಟ್ಟಡ ನಕ್ಷೆಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 15ರ ಅಡಿಯಲ್ಲಿ ಯೋಜನಾ ಪ್ರಾಧಿಕಾರದಿಂದ ಅನುಮೋದಿಸಿಕೊಳ್ಳುವುದು.
9) ವಲಯ ನಿಯಮಾವಳಿಗಳ ನಿಯಮ 11.3.1 (d) ರಂತೆ ಈ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯು ಉದ್ದೇಶಿತ ಕಟ್ಟಡಗಳ ಬ್ಲಾಕ್‌ಗಳು, ಉಪಗಮನ ರಸ್ತೆ, ಹೈವೇಗಳು, ಉದ್ಯಾನವನ ಮತ್ತು ಖಾಲಿ ಜಾಗಗಳು, ನಾಗರೀಕ ಸೌಕರ್ಯ ಜಾಗಗಳನ್ನು ನಿಗದಿಪಡಿಸಿರುವ ನಕ್ಷೆಯಾಗಿದ್ದು ಎಲ್ಲಾ ಅಗತ್ಯ ನಿರಾಕ್ಷೇಪಣಾ ಪತ್ರಗಳನ್ನು ಕಟ್ಟಡ ನಕ್ಷೆ ಅನುಮೋದಿಸುವ ಸಂದರ್ಭದಲ್ಲಿ ಸಲ್ಲಿಸತಕ್ಕದ್ದು.
10) ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಪೂರ್ವದಲ್ಲಿ ಅಗತ್ಯ ಅಭಿವೃದ್ಧಿ ಶುಲ್ಕವನ್ನು ಯೋಜನಾ ಪ್ರಾಧಿಕಾರಕ್ಕೆ/ಸ್ಥಳೀಯ ಸಂಸ್ಥೆಗೆ ಪಾವತಿಸತಕ್ಕದ್ದು.
11) ಸದರಿ ಪ್ರದೇಶದ ಒಳಗೆ ಹೋಗಲು ಮತ್ತು ಹೊರಗೆ ಬರಲು ಸಂಚಾರ ವ್ಯವಸ್ಥೆಯಲ್ಲಿ ಅಡಚಣೆಯುಂಟಾಗದಂತೆ ವ್ಯವಸ್ಥೆ ಕಲ್ಪಿಸುವುದು, ವಾಹನ ತಪಾಸಣೆಗೆ ಮತ್ತು ಭದ್ರತಾ ವ್ಯವಸ್ಥೆಯನ್ನು ಅಳವಡಿಸಿದಲ್ಲಿ ಸ್ವತ್ತಿನ ಒಳಭಾಗದಲ್ಲಿ ನಿರ್ವಹಿಸುವುದು.
12) ಅಗ್ನಿಶಾಮಕ ಇಲಾಖೆ, ವೈಮಾನಿಕ ಇಲಾಖೆ, ಸ್ಥಳೀಯ ಸಂಸ್ಥೆ, ಬೆಸ್ಕಾಂ ಹಾಗೂ ಕೆ.ಎಸ್.ಪಿ.ಸಿ.ಬಿ. ಮಂಡಳಿ/ ಇಲಾಖೆಗಳ ನಿರಾಕ್ಷೇಪಣಾ ಪತ್ರಗಳನ್ನು ಯೋಜನಾ ಪ್ರಾಧಿಕಾರವು ಪಡೆದು ಕಟ್ಟಡ ನಕ್ಷೆ ಮಂಜೂರಾತಿ ನೀಡುವುದು.

13) ಅರ್ಜಿದಾರರು ಉದ್ದೇಶಿಸಿರುವ ಜಮೀನಿನಲ್ಲಿ ಸರ್ಕಾರಿ ಅಥವಾ ಅನ್ಯ ಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದುಬಂದಲ್ಲಿ ಅಂತಹ ಸಂದರ್ಭದಲ್ಲಿ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಅನುಮೋದಿತ ಅಭಿವೃದ್ಧಿ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ.

14) ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದನೆ ಸಂಬಂಧ ಜಮೀನಿನ ಮಾಲೀಕತ್ವದ ಬಗ್ಗೆ ಅರ್ಜಿದಾರರು ತಪ್ಪು ಮಾಹಿತಿ/ದಾಖಲಾತಿ ನೀಡಿದ್ದಲ್ಲಿ ಅಭಿವೃದ್ಧಿ ಯೋಜನಾ ನಕ್ಷೆಯ ಅನುಮೋದನೆಯು ತನ್ನಿಂತಾನೇ ರದ್ದಾಗುತ್ತದೆ.

15) ಅಭಿವೃದ್ಧಿ ಯೋಜನೆಯಲ್ಲಿನ ಘನತ್ಯಾಜ್ಯಗಳನ್ನು ಪ್ಲಾಸ್ಟಿಕ್ ಮತ್ತು ಇತ್ಯಾದಿಯಾಗಿ ವಿಂಗಡಿಸಿ, Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು.

16) ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 209 ಬಿಎಂಆರ್ 2016, ದಿನಾಂಕ: 31.03.2017 ರ ರೀತ್ಯ ಪತ್ರಿಕೆ, ಮಾಧ್ಯಮ, ಜಾಹೀರಾತು ಪ್ರಕಟಣೆಗಳಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಹೆಸರನ್ನು ದುರ್ಬಳಕೆ ಮಾಡಿಕೊಳ್ಳುವಂತಿಲ್ಲ. ತಪ್ಪು ಮಾಹಿತಿ ಪ್ರಕಟಿಸದೇ ಅನುಮೋದನೆ ಪಡೆದುಕೊಂಡಿರುವ ಯೋಜನಾ ಪ್ರಾಧಿಕಾರದ ಹೆಸರನ್ನು ಮಾತ್ರ ನಮೂದಿಸತಕ್ಕದ್ದು.

17) ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರವು ವಿಧಿಸುವ ಇತರೆ ಷರತ್ತುಗಳಿಗೆ ಬದ್ಧರಾಗಿರುವುದು.

Thippeswamy 8/9/2017
**ಸದಸ್ಯ ಕಾರ್ಯದರ್ಶಿಗಳು**
ಉಪನಗರ ವರ್ತುಲ ರಸ್ತೆ (STRR)
ಯೋಜನಾ ಪ್ರಾಧಿಕಾರ ಹಾಗೂ
ಮಹಾನಗರ ಯೋಜಕರು,
ಬೆಂ.ಮ.ಪ್ರ.ಪ್ರಾ, ಬೆಂಗಳೂರು.

**ಇವರಿಗೆ,**

ಮೆ॥ ಐಕಾನಿಕಾ ಪ್ರಾಜೆಕ್ಟ್ಸ್
5ಎಸಿ-510, ಹೆಚ್.ಆರ್.ಬಿ.ಆರ್. ಬಡಾವಣೆ
2ನೇ ಬ್ಲಾಕ್, 2ನೇ ಬ್ಲಾಕ್,
ಕಲ್ಯಾಣನಗರ
ಬೆಂಗಳೂರು-560 043